**ಪ್ರಧಾನ ದಿವಾಣಿ ಹಾಗೂ ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ ಇವರ ನ್ಯಾಯಾಲಯದಲ್ಲಿ,**

**ಧಾರವಾಡ**

**ಸಿ.ಸಿ. ನಂಬರ್‌ಃ** 1336/2024

**ಡಿ .ಡಬ್ಲ್ಯುಃ** 1

| | | |
|---|---|---|
| ಸಾಕ್ಷಿಯ ಹೆಸರು | : | ಚಯಾನಂದ ರಾಯ್ಕರ |
| ತಂದೆಯ ಹೆಸರು | : | ಮಂಜುನಾಥ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ತೇಜಸ್ವಿನಗರ, ಧಾರವಾಡ |

**ದಿಃ 22-08-2026 ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಆರೋಪಿತರ ಪರವಾಗಿ ಶ್ರೀ ಎಫ್ ಬಿ ಡಿ ವಕೀಲರಿಂದಃ**

1. ಪಿರ್ಯಾದಿದಾರನು ನನಗೆ ದೂರದ ಸಂಬಂಧಿಕನು ಮತ್ತು ಒಂದೆ ಜಾತಿಯವನು ಇರುತ್ತಾನೆ. ನನ್ನ ಮತ್ತು ಪಿರ್ಯಾದಿದಾರನ ನಡುವೆ ಯಾವುದೆ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ. 2014 ರಲ್ಲಿ ರೈಲ್ವೆ ನೌಕರರ ಕೆ ಬರನಬಸ್ಸರವರ ಪರಿಚಯ ಆಗಿದ್ದರು. ನನ್ನ ಇಬ್ಬರು ಮಕ್ಕಳು ಮತ್ತು ಪಿರ್ಯಾದಿದಾರನ ಇಬ್ಬರು ಮಕ್ಕಳು ನನ್ನ ತಮ್ಮನ ಮಕ್ಕಳು ಮತ್ತು ಸಂಬಂಧಿಕರ ಮಕ್ಕಳು ಎಲ್ಲರೂ ಸೇರಿ 11 ರು ಸೇರಿ ರೈಲ್ವೆ ಕೆಲಸಕ್ಕೆಂದು ರೂ 28 ಲಕ್ಷ ಹಣವನ್ನು ಕೆ ಬರನಾಬಸ್ಸರವರಿಗೆ ಕೊಟ್ಟಿದ್ದೆವು. ಹಣಕೊಟ್ಟು 4 ವರ್ಷಗಳಾದರೂ ಕೆ ಬರನಾಬಸ್ಸರವರು ಕೆಲಸವನ್ನು ಕೊಡಿಸಲಿಲ್ಲ ಮತ್ತು ಹಣವನ್ನು ಮರಳಿ ಕೊಡಲಿಲ್ಲ. ನಾವೆಲ್ಲರೂ ಹೋಗಿ ಕೆ ಬರನಾಬಸ್ಸನವರಿಗೆ ಹಣವನ್ನು ಮರಳಿ ಕೊಡಲು ಕೇಳಿದಾಗ ಕೆಲಸ ಮಾಡಿಸಿಕೊಡುತ್ತೇನೆ ಆಗದಿದ್ದರೆ ಹಣ ಮಾಪಸ್ಸ ಕೊಡುತ್ತೇನೆ ಎಂದು ಹೇಳಿದರು. ಹಣವನ್ನು ಮತ್ತು ಕೆಲಸವನ್ನು ಕೊಡದೆ ಇದ್ದ ಕಾರಣಕ್ಕೆ ಪೆಬ್ರುವರಿ 2018 ರಲ್ಲಿ ಕೆ ಬರನಾಬಸ್ಸರವರು 28 ಲಕ್ಷ ರೂ ಹಣದ ಬಾಂಡ ಬರೆದುಕೊಟ್ಟರು. ಆಗ ಕೆ ಬರನಾಬಸ್ಸರವರು ಮರಳಿ ರೂ 5 ಲಕ್ಷ ಹಣವನ್ನು ಮಾತ್ರ ಕೊಟ್ಟಿದ್ದರು. ನಂತರ 23 ಕ್ಷ

ಹಣವನ್ನು ಕೊಡುತ್ತೇನೆ ಎಂದು ಹೇಳಿದ್ದರು. ಆಗ ನಾನು ವಿದ್ಯಾಗೀರಿ ಪೋಲೀಸರಿಗೆ ದೂರನ್ನು ಕೊಟ್ಟಿದ್ದೆನು.

2. ಪೋಲೀಸರು ಕೆ ಬರನಾಬಸ್ಸರವರನ್ನು ಕರೆಸಿ ವಿಚಾರಣೆ ಮಾಡಿದರು. ಆ ಸಮಯದಲ್ಲಿ ನಾನು, ಎಚ್ ಆರ್ ನಾಗರಾಜ, ಮಂಜುನಾಥ ರಾಯ್ಕುರ, ಮತ್ತು ಪಿರ್ಯಾದಿದಾರರು ಇದ್ದೆವು. ಪೋಲೀಸರು ಕೆ ಬರನಾಬಸ್ಸರವರ ಕಡೆಯಿಂದ ಎರಡು ಪತ್ರಗಳನ್ನು ಬರೆಸಿಕೊಂಡಿದ್ದರು. ನಂತರ 9 ಲಕ್ಷ 50 ಸಾವಿರ ಚಕ್ಕನ್ನು ಕೆ ಬರನಾಬಸ್ಸರವರಿಂದ ಕೊಡಿಸಿ ಕೊಟ್ಟಿದ್ದರು. ಆ ಚೆಕ್ಕನ್ನು ಬ್ಯಾಂಕಿಗೆ ಹಾಕಿದಾಗ ಹಣ ಇಲ್ಲ ಎಂದು ಚೆಕ್‌ಬೌಂಸ್ ಆಗಿತ್ತು. ಈ ವಿಷಯವನ್ನು ನಾನು ಕೆ ಬರನಾಬಸ್ಸವರಿಗೆ ತಿಳಿಸಿದ್ದೆನು. ಆಗ ನಾನು ಕೆ ಬರನಾಬಸ್ಸನವರ ವಿರುದ್ಧ ಚೆಕಬೌಂಸ ಕೇಸನ್ನು ದಾಖಲಿಸಿದ್ದೆನು.

3. ಎರಡು ವರ್ಷಗಳ ನಂತರ ಪಿರ್ಯಾದಿದಾರರು ಅವರ ಜೊತೆಗೆ 4 ಜನರು ನಮ್ಮ ಮನೆಗೆ ಬಂದು ಚೆಕ್ಕನ್ನ ಅಥವಾ ಹಣವನ್ನು ಕೊಡು ಎಂದು ಒತ್ತಾಯ ಮಾಡಿದಾಗ ಪಿರ್ಯಾದಿದಾರನು ನನ್ನನ್ನು ಕೋರ್ಟನ ಆವರಣದಲ್ಲಿ ಕರೆದುಕೊಂಡು ಬಂದು ಒಂದು ಬಾಂಡನ್ನು ಬರೆಸಿ 4 ಚೆಕ್ಕುಗಳನ್ನು ತೆಗೆದುಕೊಂಡನು. ನಾನು ಕೊಟ್ಟ ಚಕ್ಕನ್ನು ದುರುಪಯೋಗ ಪಡಿಸಿಕೊಂಡು ಪ್ರಕರಣ ದಾಖಲಿಸಿರುತ್ತಾನೆ. ಈ ವಿಷಯವು ನ್ಯಾಯಾಲಯದಿಂದ ನೋಟೀಸ ಬಂದ ನಂತರ ಗೊತ್ತಾಗಿರುತ್ತದೆ. ಈ ವ್ಯವಹಾರವನ್ನು ಬಿಟ್ಟು ಬೇರೆ ಯಾವುದೆ ವ್ಯವಹಾರ ಇರುವುದಿಲ್ಲ.

ಈ ಹಂತಲ್ಲಿ ಮುಂದುವರೆದ ವಿಚಾರಣೆಗೆ ಕಾಲಾವಕಾಶ ಕೋರುತ್ತಿದ್ದುದರಿಂದ ಮುಂದೂಡಲಾಯಿತು.

(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.**)

**ಓ. ಹೇ. ಕೆ. ಸರಿ ಇದೆ.** **ನನ್ನ ಸಮಕ್ಷಮ**

**ಪ್ರಧಾನ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.**

**ಡಿ ಡಬ್ಲ್ಯುಃ 1**